ಸಂಪಾದಕೀಯ
EDITORIAL

# ಕಲಾಪ ಅರ್ಥಪೂರ್ಣವಾಗಲಿ

## ಜನಹಿತದ ಆಶಯ ಸಾಕಾರಕ್ಕೆ ವೇದಿಕೆಯಾಗಲಿ

ಈ ಸಲದ ರಾಜ್ಯ ವಿಧಾನ ಮಂಡಲದ ಬಜೆಟ್ ಅಧಿವೇಶನ ಮುಕ್ತಾಯಗೊಂಡಿದೆ. 21 ದಿನಗಳ ವಿಧಾನಸಭೆ ಅಧಿವೇಶನದಲ್ಲಿ ಅರ್ಥಪೂರ್ಣ ಚರ್ಚೆ ನಡೆದದ್ದು ಎಷ್ಟು, ವ್ಯರ್ಥ ಕಾಲಹರಣ ನಡೆದದ್ದು ಎಷ್ಟು ಪಾಲು ಎಂಬುದನ್ನು ಈಗ ವಿವೇಚಿಸಬಹುದು. ಈ ಅಧಿವೇಶನದಲ್ಲಿ 11 ವಿಧೇಯಕಗಳ ಮಂಡನೆಯಾಗಿದ್ದು, 9ನ್ನು ಅಂಗೀಕರಿಸಲಾಗಿದೆ. ಅವುಗಳ ಬಗ್ಗೆ ಸವಿವರವಾಗಿ ಚರ್ಚಿಸಲಾಗಿದೆಯೇ? ಬಜೆಟ್ ಅಧಿವೇಶನದಲ್ಲಿ ಬಜೆಟ್‌ನಲ್ಲಿ ನೀಡಲಾದ ಅನುದಾನ, ಅದರ ವಿನಿಯೋಗ, ಕೊರತೆ, ಕಡೆಗಣಿಸಲ್ಪಟ್ಟ ಕ್ಷೇತ್ರಗಳು, ವಿತ್ತೀಯ ಕೊರತೆ, ಅದನ್ನು ತುಂಬಿಸುವ ಬಗೆ- ಇವುಗಳ ಬಗೆಗೆಲ್ಲಾ ಚರ್ಚೆಯಾಗಬೇಕಾಗಿತ್ತು. ಅಂಥದ್ದು ಆದದ್ದೇನೂ ಕಾಣಿಸಲಿಲ್ಲ. ಇನ್ನು ಪ್ರಶ್ನೆಗಳು, ಉತ್ತರಗಳು, ವರದಿಗಳ ಮಂಡನೆ, ಶೂನ್ಯವೇಳೆ- ಇವೆಲ್ಲ ಇದ್ದರೂ ಉದ್ದೇಶಿತ ಸಾಧನೆ ಆಗಲಿಲ್ಲ.

ಇದರ ಜೊತೆಜೊತೆಗೇ ಅನಗತ್ಯ ಚರ್ಚೆಗಳು ಸದನದ ಸಮಯವನ್ನು ತಿಂದುಹಾಕಿದವು. 'ಒಂದು ದೇಶ ಒಂದು ಚುನಾವಣೆ' ವಿಷಯದ ಬಗ್ಗೆ ನಡೆಯಬೇಕಿದ್ದ ಚರ್ಚೆ ಸರಿಯಾಗಿ ನಡೆಯಲಿಲ್ಲ. ಈ ವಿಚಾರದಲ್ಲಿ ಪ್ರತಿಪಕ್ಷವೂ ಎಡವಿತು. ಅಧಿವೇಶನದ ಕೊನೆಯ ಹಂತದಲ್ಲಿ ಮಾಜಿ ಸಚಿವರ ಸಿಡಿ ಬಗೆಗಿನ ಚರ್ಚೆ ಸದನದ ಸಮಯವನ್ನೆಲ್ಲ ತಿಂದುಹಾಕಿತು. ಸಿಡಿ ಪ್ರಕರಣವೀಗ ತನಿಖೆಯ ಹಂತದಲ್ಲಿದೆ, ಮುಂದೆ ಅದು ನ್ಯಾಯಾಂಗಕ್ಕೂ ಹೋಗಬಹುದು; ಇದು ಸದನದಲ್ಲಿ ಚರ್ಚೆ ನಡೆದು ತೀರ್ಮಾನವಾಗಬೇಕಿರುವ ಪ್ರಮುಖ ರಾಜ್ಯ ಹಿತಾಸಕ್ತಿಯ ವಿಚಾರವೇನೂ ಅಲ್ಲ. ಚರ್ಚೆ ನಡೆಸಲೇಬೇಕು ಎಂದಿದ್ದರೆ ಎಷ್ಟೊಂದು ವಿಷಯಗಳಿದ್ದವು. ಕೊರೊನಾದ ಎರಡನೇ ಅಲೆ ರಾಜ್ಯವನ್ನು ಕಂಗೆಡಿಸಲು ಆರಂಭಿಸಿದೆ. ಇದನ್ನು ತಡೆಯಲು ಸರಕಾರಿ ಕೇಂದ್ರಗಳು ಸಜ್ಜಾಗಿವೆಯೇ, ಪರೀಕ್ಷೆಗಳು ಸಾಕಷ್ಟು ನಡೆಯುತ್ತಿವೆಯೇ, ಮೊದಲಿನ ಪ್ರಮಾಣದ ಪರೀಕ್ಷಾ-ಚಿಕಿತ್ಸಾ ಕೇಂದ್ರಗಳು ಹಾಗೂ ಕಟ್ಟೆಚ್ಚರ ಈಗ ಕಾಣಿಸುತ್ತಿಲ್ಲ ಯಾಕೆ ಎಂಬುದನ್ನು ಯಾರಾದರೂ ಪ್ರಶ್ನಿಸಬಹುದಾಗಿತ್ತು. ಬೇಸಿಗೆ ಆಗಮಿಸಿದೆ, ಹಲವೆಡೆ ಶುದ್ಧ ಕುಡಿಯುವ ನೀರು ಹಾಗೂ ನೀರಾವರಿಗೆ ಸಮಸ್ಯೆಯಾಗಿದೆ. ರೈತರ ದೊಡ್ಡ ಮಟ್ಟದ ಜಾಥಾ ನಡೆದು ತಮ್ಮ ಸಮಸ್ಯೆಗಳನ್ನು ಅವರು ಮಂಡಿಸಿದ್ದಾರೆ, ಅವರ ಸಂಕಷ್ಟಗಳ ಬಗ್ಗೆ ಚರ್ಚೆಯಾಗಬಹುದಿತ್ತು. ಖಾಸಗಿ ಶಾಲೆಗಳ ಶುಲ್ಕ, ಪದವಿ ಪರೀಕ್ಷೆ, ಬೆಲೆ ಏರಿಕೆ ಇವೆಲ್ಲವೂ ಕಗ್ಗಂಟಾಗಿ ಕೂತಿವೆ. ಯಾವುದರ ಬಗ್ಗೆಯೂ ಚರ್ಚಿಸದೆ, ರಾಜ್ಯದ ಜನಹಿತಚಿಂತನೆಯ ದೃಷ್ಟಿಯಿಂದ ನಿರರ್ಥಕವಾದ ಮಾತುಗಳಿಗೆ ಈ ವೇದಿಕೆ ಬಲಿಯಾಗಬಾರದಿತ್ತು.



ಶಾಸನಸಭೆಗಳಿರುವುದೇ ಅರ್ಥಪೂರ್ಣವಾದ ಗಂಭೀರ ಚರ್ಚೆಗಾಗಿ. ಚರ್ಚೆಯೇ ಇಲ್ಲದೆ ಎಲ್ಲವೂ ಅಂಗೀಕಾರವಾಗುವುದಾದರೆ ಶಾಸನಸಭೆಯ ಅಸ್ತಿತ್ವವೇ ಪ್ರಶ್ನಾರ್ಹ. ಜನತೆಯ ತೆರಿಗೆಯ ಕೋಟ್ಯಂತರ ಹಣವೂ ಇದರಿಂದ ವ್ಯರ್ಥ. ಇಲ್ಲಿ ವೆಚ್ಚವಾಗಿರುವುದು ನೂರಾರು ಜನಪ್ರತಿನಿಧಿಗಳ, ಅಂದರೆ ರಾಜ್ಯದ ಜನತೆಯ ಅಮೂಲ್ಯ ಸಮಯ. ಜನಪ್ರತಿನಿಧಿಗಳ ಸ್ಥಾನದಲ್ಲಿರುವವರು ಜನತೆಯ ಹಿತಾಹಿತಗಳಿಗೆ ಜವಾಬ್ದಾರರಾಗಿರುತ್ತಾರೆ. ಆಡಳಿತ ಪಕ್ಷ ಹಾಗೂ ಪ್ರತಿಪಕ್ಷಗಳು ಸದನದಲ್ಲಿ ಪೂರ್ತಿ ಹೊಣೆಗಾರಿಕೆ ತೋರಿಸಲಿಲ್ಲ. ಪ್ರಜಾಪ್ರಭುತ್ವದ ಶೈಥಿಲ್ಯ ಶಾಸನಸಭೆಗಳಿಂದ ಒಟ್ಟಾರೆ ಆಡಳಿತ- ಅಧಿಕಾರಶಾಹಿಗೆ, ನಂತರ ಜನಜೀವನಕ್ಕೆ ಹರಡುತ್ತದೆ. ಇದು ವಿಧಾನಮಂಡಲ ಅಧಿವೇಶನ ನಡೆಯಬೇಕಾದ ರೀತಿಯಲ್ಲ. ಇದರಿಂದ ಪ್ರಜಾಪ್ರಭುತ್ವದ ಯಾವ ಆಶಯವೂ ಸಾಧ್ಯವಾಗದು. ಶಾಸಕರು ತಾವು ಜನರ ಪ್ರತಿನಿಧಿಗಳೆಂಬುದನ್ನು ಮರೆತು ಮಾತು-ವರ್ತನೆಗಳಲ್ಲಿ ನಡೆದುಕೊಳ್ಳುವುದು ಅವರಿಗೂ ಅವರಿರುವ ಶಾಸನಸಭೆಗೂ ಭೂಷಣವಲ್ಲ. ಆಡಳಿತದ ನೀತಿ ನಿರೂಪಣೆಗಳಾಗಬೇಕಾದ ಶಾಸನಸಭೆಗಳು ದೇಗುಲದಂತೆ ಪವಿತ್ರವಾದುದು. ಇಲ್ಲಿ ನಡೆಯುವ ಮಾತುಕತೆ, ಆಗುವ ಚರ್ಚೆಗಳು ಒಟ್ಟು ರಾಜ್ಯದ ಘನತೆಯನ್ನು ಎತ್ತರಿಸಬೇಕೇ ಹೊರತು ತಗ್ಗಿಸಬಾರದು. ಕರ್ನಾಟಕದ ಶಾಸನಸಭೆ, ಇಲ್ಲಿನ ನಡಾವಳಿಗಳು ಸಜ್ಜನಿಕೆ, ಮುತ್ಸದ್ದಿತನ, ಜನಹಿತದ ವಿವೇಕಗಳಿಗೆ ಹೆಸರಾಗಿವೆ. ಇದನ್ನು ಮುಂದಕ್ಕೂ ಉಳಿಸಿಕೊಳ್ಳುವುದು ಶಾಸಕರ ಹೊಣೆಗಾರಿಕೆ. ಅಧಿವೇಶನದಿಂದ ಅಧಿವೇಶನಕ್ಕೆ ಜನಪ್ರತಿನಿಧಿಗಳ ಅಧ್ಯಯನ, ಅರ್ಹತೆ, ಚರ್ಚೆಯ ಸಾಮರ್ಥ್ಯ, ಸದನದೆಡೆಗೆ ಅವರು ತೋರುವ ಗೌರವ- ಇವೆಲ್ಲ ಹೆಚ್ಚುತ್ತ ಹೋಗಬೇಕು.